**<u>ದಿನಾಂಕಃ 27-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>**

**<u>ಪಾಟೀ ಸವಾಲು ಎದುರದಾರರ ಪರ ಶ್ರೀ ಎಸ್.ಡಿ.ಎಸ್. ವಕೀಲರಿಂದಃ</u>**

1. ನಾನು ಮನಗೂಳಿಯಲ್ಲಿ ವಾಸವಾಗಿರುತ್ತೇನೆ. ಮನಗೂಳಿಯಲ್ಲಿ ರೆಡ್ಡಿಗೆರಿಯಲ್ಲಿ ಮನೆ ಇರುತ್ತದೆ. ರಡ್ಡಿಗೆರಿ ಮನೆ ಊರ ಮಧ್ಯದಲ್ಲಿ ಇರುತ್ತದೆ. ಪೊಸ್ಟಮೇನ್ ಸಾಬರಪಕ್ಕಿ ಇರುತ್ತಾರೆ. ನನ್ನ ಮನೆಯಿಂದ ಪೊಸ್ಟ ಆಫೀಸ್ 10-15 ಮನೆಗಳ ನಂತರ ಇರುತ್ತದೆ. ಸಾಮಾನ್ಯವಾಗಿ ಪೋಸ್ಟ ಬಂದರೆ ನಮ್ಮ ಮನೆಗೆ ನೀಡುತ್ತಾರೆ ಎಂದರೆ ಸರಿ. ಪೊಸ್ಟಮೇನ್ ಯಾವ ಊರಿನವರು ಎಂದು ನನಗೆ ಗೊತ್ತಿಲ್ಲ. ಪೊಸ್ಟಮೇನ್ ರವರು ನಮ್ಮ ಊರಿನಲ್ಲಿ ವಾಸವಾಗಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪೊಸ್ಟಮೇನ್ ನಮ್ಮ ಊರಿನಲ್ಲಿ 2 ವರ್ಷಗಳಿಂದ ಕೆಲಸ ಮಾಡುತ್ತಿರುತ್ತಾರೆ.

2. ಸನ್ 2014 ರಲ್ಲಿ ಯಾರು ಪೊಸ್ಟಮೇನ್ ಆಗಿದ್ದರು ಎಂದು ನನಗೆ ಗೊತ್ತಿಲ್ಲ. ಸನ್ 2015 ರಲ್ಲಿ ನಮ್ಮ ಊರಿನವರೆ ಪೊಸ್ಟಮೇನ್ ಆಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅರ್ಜಿಯನ್ನು ಯಾವ ಕಾರಣಕ್ಕೆ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳು ನನಗೆ ಗೊತ್ತಿಲ್ಲ. ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. O.S.No.502/2014 ನು ಎದುರುದಾರರು ದಾವೆ ಸಲ್ಲಿಸಿದ್ದು, ಏಕಪಕ್ಷಿವಾಗಿ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ನೋಟಿಸ ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

3. O.S.No. 502/2014 ನು ನೋಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ವಕೀಲರು ನೋಟಿಸು ಬಂದಿತ್ತಾ ಎಂದು ಕೇಳಿರುತ್ತಾರೆ ಎಂದರೆ ಸಾಕ್ಷಿಯು ನಾನು ಗೊತ್ತಿಲ್ಲ ಎಂದು ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ದಿಃ 30.09.2015 ರಂದು ನ್ಯಾಯಾಲಯದಿಂದ ಕಳುಹಿಸಿದ ನೋಟಿಸು ಮುಟ್ಟಿರುತ್ತದೆ ಎಂದರೆ ಸರಿಯಲ್ಲ. ನನ್ನ ಮನೆಯು ಬಾಗಿಲು ಹಾಕಿರುತ್ತದೆ ಎಂದು ಪೊಸ್ಟ ಆಫೀಸರವರಿಂದ ಹಿಂದುರುಗಿಸಿತ್ತೇನೆ ಎಂದರೆ ಸರಿಯಲ್ಲ.

4. ಪೊಸ್ಟಮೇನ್ ರವರನ್ನು ವಿಚಾರಣೆ ಮಾಡಬೇಕೆಂದು ಎದುರುದಾರನು ಅರ್ಜಿ ಹಾಕಿದ್ದ ಎಂದರೆ ಸಾಕ್ಷಿಯು ಪೊಸ್ಟಮೇನ್ ರವರು ಬಂದಿಲ್ಲ ಎಂದು ನುಡಿಯುತ್ತಾರೆ. ಪೊಸ್ಟಮೇನ್ ರವರಿಂದ ಮಾಹಿತಿ ನೀಡಬೇಕೆಂದು ಎದುರುದಾರರು ಅರ್ಜಿ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಷಯದ ಬಗ್ಗೆ ನಾನು ನನ್ನ ವಕೀಲರಿಗೆ ಕೇಳಿರುವುದಿಲ್ಲ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿದ್ದು, ಸದರಿ ದಾಖಲಾತಿ ಪ್ರಕಾರ ನಾನು ಪೊಸ್ಟನ್ನು ಹಿಂದುರುಗಿಸಿ ಕಳುಹಿಸಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಬಳಿ ಪೊಸ್ಟಮೇನ್ ರವರ ಯಾವುದೇ ನೋಟಸನ್ನು ತಗೆದುಕೊಂಡು ಬಂದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿದ್ದು, ಸದರಿ ದಾಖಲಾತಿಯಲ್ಲಿ ಬರೆದ ವಿಳಾಸವನ್ನು ಓದಿ ಹೇಳಿದ್ದು ಸದರಿ ಳವಿಳಾರಸ ನನ್ನದಾಗಿರುತ್ತದೆ ಎಂದು ಸಾಕ್ಷಿಯು ಅದನ್ನು ಒಪ್ಪಿಕೊಂಡ ಕಾರಣ ಅದನ್ನು ನಿ.ಆರ್-1 ಎಂದು ಗುರುತಿಸಲಾಯಿತು. ನಿ.ಆರ್-1 ರಲ್ಲಿ ಇರುವ ವಿಳಾಸ ಮತ್ತು ನಾನು ಸಲ್ಲಿಸಿದ ಅರ್ಜಿಯ ವಿಳಾಸ ಒಂದೆ ಆಗಿರುತ್ತದೆ ಎಂದರೆ ಸರಿ. ನನ್ನ ಅರ್ಜಿಯಲ್ಲಿ ನಮೂದಿಸಿ ವಿಳಾಸ ಮತ್ತು ನಿ.ಆರ್-1 ರಲ್ಲಿ ನಮೂದಸಿ ವಿಳಾಸ ಒಂದೆ ಆಗಿದ್ದು, ಪೊಸ್ಟ ಆಫೀಸನಿಂದ ನನಗೆ ಯಾವುದೆ RPAD ಬಂದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ RPAD ಬಂದ ಬಗ್ಗೆ ಮಾಹಿತಿ ಇದ್ದರು ಸಹಿತ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ಶ್ರೀ ಅಮಿತ್ ಘಟ್ಟಿ)**
**ದಿವಾಣಿ ನ್ಯಾಯಾಧೀಶರು ಮತ್ತು**
**ನ್ಯಾಯಿಕ ದಂಡಾಧಿಕಾರಿಗಳು**
**ಬಸವನ ಬಾಗೇವಾಡಿ.**